ಆ) 12 ಅಕಾಡೆಮಿಗಳು ಅವುಗಳ ಸಿಬ್ಬಂದಿ ವೇತನ, ಹಾಗೂ ಕಾರ್ಯ ಚಟುವಟಿಕೆಗಳಿಗೆ ಸಮಾನವಾಗಿ ಅನುದಾನ ನೀಡಿಕೆ. ಕಾರ್ಯ ನಿರ್ವಹಿಸಲು ಸ್ಥಳ ಮತ್ತು ಕಛೇರಿ ಸೌಲಭ್ಯ ಕಲ್ಪಿಸಲಾಗಿದೆ.

ಇ) ಆಯಾ ಕ್ಷೇತ್ರದಲ್ಲಿ ನುರಿತ ಪರಿಣಿತರನ್ನು ಸದಸ್ಯರನ್ನಾಗಿ ಆಯ್ಕೆ ಮಾಡಲಾಗುತ್ತದೆ. ಇದಕ್ಕೆ ವಯಸ್ಸಿನ ಮಿತಿ ಇರುವುದಿಲ್ಲ. ಸದಸ್ಯರಾಗಲು ಅರ್ಹತೆ ಮಾತ್ರ ಆಧಾರವಾಗಿರುತ್ತದೆ. ಬೇರೆ ಮಾನದಂಡ ಇರುವುದಿಲ್ಲ.

633 ಶ್ರೀ ರುದ್ರೇಶಗೌಡ ವೈ. ಎನ್. (ಬೇಲೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆ ಮಲೆನಾಡು ಪ್ರದೇಶವಾದ ಬೇಲೂರು, ಸಕಲೇಶಪುರ ಮತ್ತು ಅರಕಲಗೂಡು ತಾಲ್ಲೂಕಿನಲ್ಲಿ ಇತ್ತೀಚೆಗೆ ಬಿದ್ದ ಮಳೆಯಿಂದಾಗಿ ಲೋಕೋಪಯೋಗಿ ಇಲಾಖೆ ಹಾಗೂ ಗ್ರಾಮೀಣ ರಸ್ತೆಗಳು ಹಾಳಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಹೀಗೆ ಹಾಳಾಗಿರುವ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಹಾಳಾದ ರಸ್ತೆಗಳ ದುರಸ್ತಿಗೆ ಸರಕಾರ ತುರ್ತಾಗಿ ಅನುದಾನ ಬಿಡುಗಡೆ ಮಾಡುವುದೇ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹಾಸನ ಜಿಲ್ಲೆ ಮಲೆನಾಡು ಪ್ರದೇಶವಾದ ಬೇಲೂರು, ಸಕಲೇಶಪುರ ಮತ್ತು ಅರಕಲಗೂಡು ತಾಲ್ಲೂಕಿನಲ್ಲಿ ಇತ್ತೀಚೆಗೆ ಬಿದ್ದ ಮಳೆಯಿಂದಾಗಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಾಜ್ಯ ಹೆದ್ದಾರಿಗಳು ಜಾಗೂ ಜಿಲ್ಲಾ ಮುಖ್ಯ ರಸ್ತೆಗಳ ಹಲವು ಭಾಗಗಳು ಹಾಳಾಗಿರುವುದು ಸರಕಾರದ ಗಮನಕ್ಕೆ ಬಂದಿರುತ್ತದೆ.

ಗ್ರಾಮೀಣ ರಸ್ತೆಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತವೆ.

ಆ) ಬೇಲೂರು ತಾಲ್ಲೂಕಿನ ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿಗಾಗಿ ರೂ.1026.91 ಲಕ್ಷಗಳನ್ನು, ಸಕಲೇಶಪುರ ತಾಲ್ಲೂಕಿನ ರಸ್ತೆಗಳ

ಅಭಿವೃದ್ಧಿಗಾಗಿ ರೂ.248.85 ಲಕ್ಷಗಳನ್ನು ಹಾಗೂ ಅರಕಲಗೂಡು ತಾಲ್ಲೂಕಿನ ರಸ್ತೆಗಳ ಅಭಿವೃದ್ಧಿಗಾಗಿ ರೂ.402.32 ಲಕ್ಷಗಳನ್ನು ವಿವಿಧ ಶಿರ್ಷಿಕೆಗಳಡಿ ಅನುದಾನವು 2009–10 ನೇ ಸಾಲಿಗೆ ಬಿಡುಗಡೆಗೊಂಡಿದ್ದು, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇವುಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಿದೆ.

ಇ) ಪ್ರಸ್ತಾವಿತ ಸಾಲಿನಲ್ಲಿ ' ಬೇಲೂರು, ಸಕಲೇಶಪುರ ಮತ್ತು ಅರಕಲಗೂಡು ತಾಲ್ಲೂಕುಗಳಲ್ಲಿನ ಲೋಕೋಪಯೋಗಿ ರಸ್ತೆಗಳ ನಿರ್ವಹಣಾ ಕಾಮಗಾರಿಗಳನ್ನು 3054 ಲೆಕ್ಕ ಶೀರ್ಷಿಕೆ ಅಡಿ ರೂ.495.51 ಲಕ್ಷ ಮೊತ್ತದಲ್ಲಿ ಕೈಗೆತ್ತಿಕೊಂಡಿದ್ದು, ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಿ ವಾಹನ ಸಂಚಾರಕ್ಕೆ ಯೋಗ್ಯವಾಗಿಡಲಾಗುತ್ತಿದೆ.

ಅನುಬಂಧ-1

ವಿಧಾನಸಭೆ ಪ್ರಶ್ನೆ ಸಂಖ್ಯೆ 633 ಕ್ಕೆ ವಿವರಗಳು

2009-10 ನೇ ಸಾಲಿಗೆ ಮಂಜೂರಾಗಿರುವ ಕಾಮಗಾರಿಗಳ ವಿವರಗಳು

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ಚೇಳೂರು				ಸಕಲೇಶಪುರ				ಅರಕಲಗೂಡು			
		ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಅನುದಾನ	ಪ್ರಸ್ತುತ ಹಂತ	ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಅನುದಾನ	ಪ್ರಸ್ತುತ ಹಂತ	ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಅನುದಾನ	ಪ್ರಸ್ತುತ ಹಂತ
1	5054-ಸುವರ್ಣ ರಸ್ತೆ ವಿಶೇಷ ಯೋಜನೆ	3	104.16	52.08	ಪ್ರಗತಿಯಲ್ಲಿದೆ	1	104.16	52.08	ಪ್ರಗತಿಯಲ್ಲಿದೆ	1	104.16	52.08	ಪ್ರಗತಿಯಲ್ಲಿದೆ
2	5054- ಡಾ: ನಂಜುಂಡಪ್ಪ ವರದಿ ಆಧಾರಿತ	9	146.43	146.43	4-ಪೂರ್ಣಗೊಂಡಿದೆ 3-ಪ್ರಗತಿಯಲ್ಲಿದೆ 2-ಟೆಂಡರ್ ಪ್ರಕ್ರಿಯೆಯಲ್ಲಿದೆ	-	-	-	-	11	200.01	200.01	9-ಪ್ರಗತಿಯಲ್ಲಿದೆ 2-ಟೆಂಡರ್ ಪ್ರಕ್ರಿಯೆಯಲ್ಲಿದೆ
3	5054-ವಿಶೇಷ ಘಟಕ ಯೋಜನೆ	7	63.28	63.28	3-ಪೂರ್ಣಗೊಂಡಿದೆ 2-ಪ್ರಗತಿಯಲ್ಲಿದೆ 2-ಟೆಂಡರ್ ಪ್ರಕ್ರಿಯೆಯಲ್ಲಿದೆ	5	67.62	67.62	ಪ್ರಗತಿಯಲ್ಲಿದೆ	2	62.61	62.61	ಪ್ರಗತಿಯಲ್ಲಿದೆ
4	5054-ಗಿರಿಜನ ಉಪಯೋಜನೆ	3	6.62	6.62	1-ಪೂರ್ಣಗೊಂಡಿದೆ 1-ಪ್ರಗತಿಯಲ್ಲಿದೆ 1-ಟೆಂಡರ್ ಪ್ರಕ್ರಿಯೆಯಲ್ಲಿದೆ	2	3.15	3.15	ಪೂರ್ಣಗೊಂಡಿದೆ	3	3.62	3.62	ಪೂರ್ಣಗೊಂಡಿದೆ.
5	ನಬಾರ್ಡ್ -14	7	193.50	193.50	ಪ್ರಗತಿಯಲ್ಲಿದೆ	1	56.00	56.00	ಪ್ರಗತಿಯಲ್ಲಿದೆ	2	84.00	84.00	ಪ್ರಗತಿಯಲ್ಲಿದೆ
6	5054- ಇತರೆ ರಸ್ತೆ ನಿರ್ಮಾಣ	6	565.00	565.00	3-ಪೂರ್ಣಗೊಂಡಿದೆ 2-ಪ್ರಗತಿಯಲ್ಲಿದೆ 1-ಪ್ರಾರಂಭಿಸಬೇಕಿದೆ.	2	210.00	70.00	ಪ್ರಗತಿಯಲ್ಲಿದೆ.	-	-	-	-
	ಒಟ್ಟು	35	1078.99	1026.91		11	440.93	248.85	0	19	454.40	402.32	